ಇ) ರದ್ದುಪಡಿಸಲಾಗಿದೆ

ಈ) ವಾರ್ಷಿಕ ತಪಾಸಣೆ ಕಾಲದಲ್ಲಿ ಕೆಲವು ಅನರ್ಹರಿಗೆ ವೇತನ ಮಂಜೂರಾದ ಪ್ರಕರಣಗಳು ಕಂಡುಬಂದು ೪ ವೃದ್ದಾಪ್ಯ ವೇತನಿಗಳಿಗೆ ಮತ್ತು ೬ ಅಂಗವಿಕಲ ವೇತನಗಳಿಗೆ ವೇತನಿವನ್ನು ರದ್ದುಪಡಿಸಲಾಗಿದೆ.

ಈ ವರ್ಷ ಮಂಜೂರಾದ ವೇತನಿಗಳ ಸಂಖ್ಯೆ

| | | |
|---|---|---|
| ೧ | ವೃದ್ದಾಪ್ಯ ವೇತನ | ೧೨೨ |
| ೨ | ವಿಧವಾ ವೇತನ | ೭೩ |
| ೩ | ಅಂಗವಿಕಲ ವೇತನ | ೨೫೩ |

ವೇತನ ಮಂಜೂರಾತಿಯಲ್ಲಿ ಜನರಿಗೆ ಕಂದಾಯ ಇಲಾಖೆಯ ನೌಕರರಿಂದ ಕಿರುಕುಳವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲಾ.

## ಜಿಲ್ಲಾ ಪುನರ್ ವಿಂಗಡಣಾ ಸಮಿತಿಯ ವರದಿಯ ಬಗ್ಗೆ

೧೪೦೬.(೧) ಶ್ರೀ ಎಸ್.ಜಿ.ಸಂಜಯ್ಯ ನವಂತ(ಗುಳೇದ ಗುಡ್ಡ).–ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪುನರ್ ವಿಂಗಡಣ ಸಮಿತಿಯು ವರದಿಯು ಸಿದ್ದವಾಗಿದೆಯೇ ?

ಆ) ವರದಿಯಲ್ಲಿ ಬಾಗಲಕೋಟೆಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆಯೇ ಹಾಗೂ ಗುಳೇದಗುಡ್ಡ ತಾಲ್ಲೂಕು ಕೇಂದ್ರ ಸ್ಥಳ ಮಾಡಬೇಕೆಂಬ ಶಿಫಾರಸ್ಸು ಮಾಡಲಾಗಿದೆಯೇ ?

ಇ) ವರದಿಯನ್ನು ಸರ್ಕಾರ ಎಂದು ಜಾರಿಗೊಳಿಸುವುದು ವರದಿಯನ್ನು ಜಾರಿಗೊಳಿಸಲು ಯಾವುದೇ ನಿರ್ದಿಷ್ಟ ಸಮಯವನ್ನು ಗೊತ್ತುಪಡಿಸಲಾಗಿದೆಯೇ ?

ಈ) ಹೊಸ ಜಿಲ್ಲೆಯ ಮಂತ್ರಿ ಹೊಸ ತಾಲ್ಲೂಕನ್ನು ಸ್ಥಾಪಿಸಿದಲ್ಲಿ, ತಲಾ ಎಷ್ಟು ಖರ್ಚು ಬರುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).–

ಅ) ಇಲ್ಲ. ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ಅಂತಿಮ ವರದಿಯು ಸ್ವೀಕೃತವಾಗಬೇಕಾಗಿದೆ.

ಆ), ಇ), ಈ) ಉಪ ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

## ಗಿರಿಜನರ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳಲ್ಲಿ ತೊಡಗಿಸಿದ ಹಣದ ಬಗ್ಗೆ

೧೩೦೧ (೧) ಶ್ರೀ ಶಿವಣ್ಣ.(ಹೆಚ್.ಡಿ.ಕೋಟೆ)ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ರಲ್ಲಿ ಗಿರಿಜನರ ಅಭಿವೃದ್ಧಿಗಾಗಿ ವಿವಿಧ ಇಲಾಖೆಯಲ್ಲಿ ವಿವಿದ ಕಾರ್ಯಕ್ರಮಗಳಿಗಾಗಿ ತೊಡಗಿಸಿದ್ದ ಹಣ ಎಷ್ಟು ?

ಆ) ೧೯೮೫–೮೬ ರಿಂದ ಪ್ರತಿ ವರ್ಷದಲ್ಲಿಯೂ ಉಳಿದಿರುವ ಹಣ ಎಷ್ಟು ? ಹಾಗೂ ಹಣ ಉಳಿಯಲು ಕಾರಣವೇನು ?